# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190–ಮಂಗಮ್ಮನಪಾಳ್ಯ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ (ಬೃಹತ್ ಮಳೆನೀರುಗಾಲುವೆ) ರವರು ದಿನಾಂಕ: 30.07.2022 ಶನಿವಾರ ಬೆಳಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ: 190ರ ಹೆಚ್.ಎಸ್.ಆರ್ ಉಪವಿಭಾಗ (ವಾರ್ಡ್ ಕಛೇರಿ) 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, 6ನೇ ಸೆಕ್ಟರ್, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು-560102,ರಲ್ಲಿ ನಡೆಸಿದ ವಾರ್ಡ್ ಸಂಖ್ಯೆ: 190-ಮಂಗಮ್ಮನಪಾಳ್ಯ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದ ಅಧ್ಯಕ್ಷರು/ನೋಡಲ್ ಅಧಿಕಾರಿಗಳು, ಸಹಾಯಕ ಅಭಿಯಂತರರು / ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ, ಸ.ಕಾ.ನಿ.ಅ (ಬೃಹತ್ ಮಳೆನೀರುಗಾಲುವೆ) | 8105005285 |
| 2 | ಶ್ರೀ ರಾಜಗೋಪಲ್ ಬಾಬು.ಎನ್ | ಕಾರ್ಯದರ್ಶಿ/ಸಹಾಯಕ ಅಭಿಯಂತರರು ವಾರ್ಡ್ ಸಂ.190 | 9480688190 |
| 3 | ಶ್ರೀ ಚಂದ್ರ ರೆಡ್ಡಿ | ಸದ್ಯಸರು | 9900115285 |
| 4 | ಶ್ರೀ ಸುರೇಶ್ ರೆಡ್ಡಿ | ಸದ್ಯಸರು | 9900388075 |
| 5 | ಶ್ರೀ ಟಿ.ಎ ಮೌಲಸಾಬ್ | ಸಾರ್ವಜನಿಕರು | 990034140 |
| 6 | ಶ್ರೀ ಎನ್.ಜೆ ಮ್ಯಾಥ್ಯೂ | ಮುನೇಶ್ವರ ನಗರ, ಕಲ್ಯಾಣ ಸಂಘ | 9900134754 |
| 7 | ಶ್ರೀ ಕೆ ಮುರಳೀಧರ್ | ಸಾರ್ವಜನಿಕರು | 9449364639 |
| 8 | ಶ್ರೀ ಇರಣ್ಣ | ಪಿ.ಎಸ್.ಐ ಸಂಚಾರಿ ಪೋಲಿಸ್ ಠಾಣೆ ಎಲೆಕ್ಟ್ರಾನಿಕ್ ಸಿಟಿ | 9449067308 |
| 9 | ಶ್ರೀ ಕೆ.ಕೆ ಮಂದಪ್ಪ | ಎ.ಎಸ್.ಐ ಬಂಡೇಪಾಳ್ಯ ಪೋಲಿಸ್ ಠಾಣೆ | 9916742606 |
| 10 | ಶ್ರೀ ವಿಕಾಸ್ ಡಿ. ಎಸ್ | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | 9845444039 |
| 11 | ಶ್ರೀ ದಿನೇಶ್.ಎಮ್ | ಸಹಾಯಕ ಅಭಿಯಂತರರು, ಬೆಸ್ಕಾಂ | 8277889660 |
| 12 | ಶ್ರೀ ರಾಮಚಂದ್ರ | ಸಹಾಯಕ ಕಂದಾಯ ಅಧಿಕಾರಿಗಳು ಹೆಚ್.ಎಸ್.ಆರ್ | 9480685984 |
| 13 | ಶ್ರೀಮತಿ ಭವಾನಿ | ಪಶುಸಂಗೋಪನೆ ನಿರೀಕ್ಷಕರು | 9448504522 |
| 14 | ಶ್ರೀ ಹೊನ್ನೂರು ಬಾಷ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾಸಂ.190 | 9480688490 |
| 15 | ಶ್ರೀ ರಫಿ | ಮೆಕಾನಿಕಲ್ ಇಂಜಿನಿಯರ್ (ಕೆ.ಸಿ.ಡಿ.ಸಿ) ಘಟಕ | 9108002673 |
| 16 | ಶ್ರೀ ಎಸ್ ನರಸಪ್ಪ | ತೋಟಗಾರಿಕೆ ನಿರೀಕ್ಷಕರು | 8105663239 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಲಾಯಿತು.

(2......)

Scanned with

- **<u>ಘನತ್ಯಾಜ್ಯ ನಿರ್ವಹಣೆ ಮತ್ತು ಕೆ.ಸಿ.ಡಿ.ಸಿ ಘಟಕ</u>**

1. ಹಿಂದಿನ ಸಭೆಯ ದಿ: 05.07.2022 ರಂದು ಮುನೇಶ್ವರ ದೇವಸ್ಥಾನ ಮುಂಭಾಗದಲ್ಲಿ ತ್ಯಾಜ್ಯವನ್ನು ಸುರಿಯುತ್ತಿರುವ ಬಗ್ಗೆ ಶ್ರೀ ಕೇಶವ ರೆಡ್ಡಿ, ಸದಸ್ಯರು ಚರ್ಚಿಸಿದ್ದು ಇಂದಿನ ಸಭೆಯಲ್ಲಿ ಹಾಜರಿದ್ದ ಶ್ರೀ ರಫಿ ರವರು ಬಾರಿ ಪ್ರಮಾಣದಲ್ಲಿ ತ್ಯಾಜ್ಯವು ಶೇಖರಣೆಯಾಗಿರುವುದರಿಂದ ಹಾಗೂ ಈಗಾಗಲೇ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಟೆಂಡರ್ ಆದ ನಂತರ ಹಂತ ಹಂತವಾಗಿ ವಿಲೇವಾರಿ ಮಾಡಲಾಗುವುದೆಂದು ಸಭೆಗೆ ತಿಳಿಸಿದರು.
2. ಹಿಂದಿನ ಸಭೆಯ ದಿ: 05.07.2022 ರಂದು ಕೆ.ಸಿ.ಡಿ.ಸಿ ಘಟಕದಿಂದ ದುರ್ವಾಸನೆಯನ್ನು ನಿಯಂತ್ರಿಸಲು ಶ್ರೀ ಶ್ರೀನಿವಾಸ ರೆಡ್ಡಿ ಸದಸ್ಯರು ಸಭೆಯಲ್ಲಿ ಚರ್ಚಿಸಿದ್ದು, ಈ ಬಗ್ಗೆ ರಫಿ ರವರು ಮಾತಾನಾಡುತ್ತಾ, ಸದರಿ ವಿಷಯದ ಬಗ್ಗೆ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ/ಅಧ್ಯಕ್ಷಕರು ಕೆಸಿಡಿಸಿ ಘಟಕ ರವರೊಂದಿಗೆ ಚರ್ಚಿಸಲಾಗಿದ್ದು, ಅದರಂತೆ ದುರ್ವಾಸನೆಯನ್ನು ನಿಯಂತ್ರಿಸಲು Coconut Shell Powder ಅನ್ನು ತ್ಯಾಜ್ಯದ ಜೊತೆಗೆ ಮಿಶ್ರಣ ಮಾಡಲು ಯೋಜಿಸಿದ್ದು, ಅನುಮೋದನೆ ಪಡೆದ್ದು ಕ್ರಮವಹಿಸುವುದಾಗಿ ಹಾಗೂ ಇದರಿಂದ ಸ್ವಲ್ಪ ಮಟ್ಟಿಗೆ ದುರ್ವಾಸನೆ ಕಡಿಮೆಯಾಗುವುದೆಂದು ಸಭೆಯಲ್ಲಿ ತಿಳಿಸಿದರು.
3. ವಾರ್ಡ್ ವ್ಯಾಪ್ತಿಯ ಕೆಸಿಡಿಸಿ ಘಟಕಕ್ಕೆ ದೈನಂದಿನ ತ್ಯಾಜ್ಯವು ಬರುತ್ತಿದ್ದು, ಗೊಬ್ಬರ ಆದ ನಂತರ Unwanted ತ್ಯಾಜ್ಯವನ್ನು ಕ್ವಾರೆಗೆ ಹೋಗುತ್ತಿರುವುದಾಗಿ ಶ್ರೀ ರಫಿ ರವರು ಸಭೆಯಲ್ಲಿ ತಿಳಿಸಿದರು.

- <u>ಬೆಸ್ಕಾಂ :-</u>

1. ಹಿಂದಿನ ಸಭೆಯ ದಿ: 05.07.2022 ರಂದು ಶ್ರೀ ಶ್ರೀನಿವಾಸ ರೆಡ್ಡಿ ಸದ್ಯಸರು ರವರು ಚರ್ಚಿಸಿದಂತೆ ಇಂದಿನ ಸಭೆಯಲ್ಲಿ ಶ್ರೀ ದಿನೇಶ್ ಎಮ್ ಕಿರಿಯ ಅಭಿಯಂತರರು ಬೆಸ್ಕಾಂ ರವರು ರಸ್ತೆಯ ಬದಿಗಳಲ್ಲಿ ಅಳವಡಿಸಿರುವ ಕಂಬಗಳನ್ನು ತೆರವುಗೊಳಿಸಲು ಉಜ್ವಾಲಾ ಫ್ಯಾಕ್ಟರಿ ಹತ್ತಿರ & ಹೊಸಪಾಳ್ಯ ಮುಖ್ಯರಸ್ತೆಯಿಂದ ಕೂಡ್ಲು ಮುಖ್ಯ ರಸ್ತೆಯ ವಿದ್ಯುತ್ ಕಂಬಗಳನ್ನು ರಸ್ತೆಯ ಅಂಚಿನಲ್ಲಿ ಸ್ಥಳಾಂತರ ಮಾಡಲು ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಬಿಬಿಎಂಪಿ ಮುಖ್ಯ ರಸ್ತೆ ರವರು Wet Mix ಹಾಕಿಸಿ Road Formation ಮಾಡುವಂತೆ ಶ್ರೀ ಚಂದ್ರ ರೆಡ್ಡಿ ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಗೈರ್ ಹಾಜರಾಗಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು (ಮುಖ್ಯ ರಸ್ತೆ) ರವರಿಗೆ ಪತ್ರ ಬರೆಯಲು ಅಧ್ಯಕ್ಷರು/ನೋಡಲ್ ಅಧಿಕಾರಿ ರವರು ಸೂಚಿಸಿದರು.

- <u>ಬಿ.ಡಬ್ಲ್ಯೂ.ಎಸ್.ಎಸ್.ಬಿ:</u>

1. ಹಿಂದಿನ ಹಲವು ಸಭೆಗಳಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಕುಡಿಯುವ ನೀರಿನ ಬಗ್ಗೆ ಚರ್ಚಿಸಿದ್ದು ವಾರಕ್ಕೆ ಒಂದು ದಿನ ನೀರು ಬಿಡುತ್ತಿದ್ದು, ಬಂಡೇಪಾಳ್ಯ, ಮದೀನನಗರ ಮತ್ತು ಇತರೆ ಕೊಳಗೇರಿ ಪ್ರದೇಶಗಳಲ್ಲಿ ಸಂಪ್ ಗಳು ಕಿರಿದಾಗಿದ್ದು, ವಾರಕ್ಕೆ ಒಂದು ಪೂರ್ತಿ ದಿನ ನೀರು ಬಿಡುವ ಬದಲು, ವಾರಕ್ಕೆ ಮೂರು ದಿನ 4 ಘಂಟೆ ನೀರು ಬಿಡುವುದು ಸೂಕ್ತ ಹಾಗೂ ವಾಟರ್ ಮ್ಯಾನ್ ರವರಿಗೆ ಈ ಬಗ್ಗೆ ಸೂಚಿಸಲು ಶ್ರೀ ಟಿ.ಎ ಮೌಲಸಾಬ್, ರವರು ಸಭೆಯಲ್ಲಿ ಪ್ರಸ್ತಾಪಿಸಿದರು.

- <u>ಕಾಮಗಾರಿ :</u>

1. 2022-23ನೇ ಸಾಲಿನಲ್ಲಿ ಒಂಟಿ ಮನೆ ನಿರ್ಮಾಣ ಯೋಜನೆ ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಹಿಂದುಳಿದ ವರ್ಗ ಹಾಗೂ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ ವರ್ಗದವರು ಫಲಾನುಭವಿಗಳು ಸಹಾಯಕ ಕಂದಾಯ ಅಧಿಕಾರಿ ರವರು ಮಹಜರ್ ಮಾಡಿರುವ ಪಟ್ಟಿಯನ್ನು ಅನುಮೋದನೆಗಾಗಿ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ರವರ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಕ್ರಮವಹಿಸಲು ಸಭೆಯಲ್ಲಿ ಶ್ರೀ ಸುರೇಶ್ ರೆಡ್ಡಿ ತಿಳಿಸಿದರು. (ಫಲಾನುಭವಿಗಳ ಪಟ್ಟಿ ಲಗತ್ತಿಸಿದೆ).

- <u>ಉದ್ಯಾನವನ :</u>

1. ವಾರ್ಡ್ ವ್ಯಾಪ್ತಿಯ ಐ.ಟಿ.ಐ ಬಡಾವಣೆ ಉದ್ಯಾನವನ ಅಭಿವೃದ್ಧಿ ಪಡಿಸಲು Action Plan ಸಿದ್ಧಪಡಿಸಿ ಕ್ರಮಕೈಗೊಳಲು ಶ್ರೀ ಟಿ.ಎ ಮೌಲಸಾಬ್, ರವರು ಸಭೆಯಲ್ಲಿ ಪ್ರಸ್ತಾಪಿಸಿದರು.
   ಕ್ರಮ: ತೋಟಗಾರಿಕೆ ಅಧೀಕ್ಷಕರು, (ಬೊ.ವ)

- <u>ಸಂಚಾರಿ ವಿಭಾಗ (ಎಲೆಕ್ಟ್ರಾನಿಕ್ ಸಿಟಿ ಪೋಲಿಸ್ ಠಾಣೆ)</u>

1. ವಾರ್ಡ್ ವ್ಯಾಪ್ತಿಯ ಮಂಗಮ್ಮನಪಾಳ್ಯ ಕೆರೆ ಯಿಂದ ಗಾರ್ವೇಭಾವಿಪಾಳ್ಯ ಸಿಗ್ನಾಲ್ ರವರಿಗೆ Unclaimed Vehicle ಗಳನ್ನು ರಸ್ತೆಯ ಬದಿಗಳಲ್ಲಿ ನಿಲ್ಲಿಸುತ್ತಿರುವುದರಿಂದ ಸಂಚಾರಕ್ಕೆ ಅಡಚಣೆಯಾಗುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ಶ್ರೀ ಟಿ.ಎ ಮೌಲಸಾಬ್ & ಶ್ರೀ ಎನ್.ಜೆ ಮ್ಯಾಥ್ಯ ರವರು ಸಭೆಯಲ್ಲಿ ತಿಳಿಸಿದರು.

(3.....)

Scanned with

2. ವಾರ್ಡ್ ವ್ಯಾಪ್ತಿಯ ಬಂಡೇಪಾಳ್ಯ ಮುಖ್ಯ ರಸ್ತೆಯಲ್ಲಿ ಬೃಹತ್ ಗಾತ್ರದ ವಾಹನಗಳನ್ನು ರಸ್ತೆಯ ಬದಿಗಳಲ್ಲಿ ನಿಲ್ಲಿಸುತ್ತಿರುವುದರಿಂದ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು ಕಿರಿದಾದ ರಸ್ತೆಯಲ್ಲಿ ವಾಹನಗಳು ಓಡಾಡಲು ತೊಂದರೆಯಾಗುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ಶ್ರೀ ಟಿ.ಎ ಮೌಲಸಾಬ್ & ಶ್ರೀ ಎನ್.ಜೆ ಮ್ಯಾಥ್ಯ ರವರು ತಿಳಿಸಿದರು

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುತ್ತಾ, ಸಭೆಯಲ್ಲಿದ್ದ ಎಲ್ಲಾ ಸದಸ್ಯರಿಗೆ, ಸಾರ್ವಜನಿಕರಿಗೆ ಮತ್ತು ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Rajagopalachalu
ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned with